ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ತರೀಕೆರೆ ಪಟ್ಟಣದಲ್ಲಿ ಸದ್ಯಕ್ಕೆ ನೀರಿನ ಕೊರತೆ ಇರುವುದಿಲ್ಲ.

ಈಗ ಹಾಲಿ ತಲಾ ೯೦ ಲೀಟರ್ ನೀರನ್ನು ದಿನಂಪ್ರತಿ ಸರಬರಾಜು ಮಾಡಲಾಗುತ್ತಿದೆ.

ಆ) ಮೇಲ್ಕಟ್ಟದ ಜಲಸಂಗ್ರಹಾಗಾರರ ಹೊರತು ಯೋಜನೆಯ ಎಲ್ಲಾ ಕೆಲಸಗಳನ್ನು ಈಗಾಗಲೇ ಪೂರ್ಣಗಿಸಿ ಮೇಲೆ ತಿಳಿಸಿದಂತೆ ನೀರು ಸರಬರಾಜು ಮಾಡುತ್ತಿರುವುದರಿಂದ ನೀರಿನ ತೊಂದರೆ ಇರುವುದಿಲ್ಲ. ಜಲಸಂಗ್ರಹಾಗಾರದ ಕೆಲಸ ಕೂಡ ನವೆಂಬರ್ ೧೯೮೭ರ ಅಂತ್ಯದ ವೇಳೆಗೆ ಮುಗಿಸಲು ಉದ್ದೇಶಿಸಲಾಗಿದೆ;

ನಗರ ಜಿಲ್ಲಾ ಪರಿಷತ್ತಿನ ಚುನಾವಣೆ

೯೪. ಶ್ರೀ ಎ. ಕೃಷ್ಣಪ್ಪ (ವರ್ತೂರು).—ಮಾನ್ಯ ಗ್ರಾಮಾಣ ಅಭಿವೃದ್ಧಿ ಪಂಚಾಯತ್ ರಾಜ್ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ನಗರ ಜಿಲ್ಲೆಗೆ ಜಿಲ್ಲಾ ಪರಿಷತ್ ಅಸ್ತಿತ್ವಕ್ಕೆ ತರಲು ಸರ್ಕಾರದ ಒಪ್ಪಿಗೆ ಇದೆಯೇ ?

ಆ) ಹಾಗಿದ್ದಲ್ಲಿ ಇದುವರೆವಿಗೂ ನಗರ ಜಿಲ್ಲಾಪರಿಷತ್‌ಗೆ ಚುನಾವಣೆನಡೆಸದಿರಲು ಕಾರಣವೇನು?

ಇ) ಸದರಿ ಚುನಾವಣೆ ನಡೆಸಲು ಈಗಲಾದರೂ ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮಾಣ ಅಭಿವೃದ್ಧಿ ಪಂಚಾಯಂತ್ ರಾಜ್ ಮತ್ತು ವಕ್ಫ್ ಮಂತ್ರಿಗಳು).

ಅ) ಹೌದು.

ಆ) ನಗರ ಪ್ರದೇಶದಲ್ಲಿ ಕೆಲವು ಸ್ಥಳಗಳನ್ನು ನಗರ ವ್ಯಾಪ್ತಿಗೆ ತರುವ ಉದ್ದೇಶದಿಂದ ಈಗಾಗಲೇ ಒಂದು ಅಧಿಸೂಚನೆಯನ್ನು ಹೊರಡಿಸಿದೆ. ಇನ್ನೂ ಅಂತಿಮ ಅಧಿಸೂಚನೆ ಬಾಕಿ ಉಳಿದಿದೆ. ಅಂತಿಮ ಅಧಿಸೂಚನೆಯನ್ನು ಹೊರಡಿಸಿದ ಕೂಡಲೇ ಚುನಾವಣೆ ನಡೆಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆ.

ಇ) 'ಅ'ನಲ್ಲಿ ಉತ್ತರಿಸಲಾಗಿದೆ.

ಅಭಿವೃದ್ಧಿ ಕೆಲಸಗಳು

೧೦೮. ಶ್ರೀ ಎ. ಕೃಷ್ಣಪ್ಪ (ವರ್ತೂರು).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹೆಚ್. ಎ. ಎಲ್. ಸ್ಯಾನಿಟರಿ ಜೋಡ್ಸ್ ವಿಂತಿಯಲ್ಲಿರುವ ಗ್ರಾಮಗಳ ಅಭಿವೃದ್ಧಿ ಕೆಲಸಗಳಿಗೆ ಸರ್ಕಾರದವರು ಮಂಜೂರು ಮಾಡಿರುವ ಹಣವೆಷ್ಟು ?

ಆ) ಹಾಗಿಲ್ಲದಿದ್ದಲ್ಲಿ ಇದಕ್ಕೆ ಕಾರಣವೇನು ?

ಇ) ಐ.ಟಿ.ಐ.ವೋಟಿಫೈಡ್ ವಿರಿಯಾ ಸವಿತಿ ಮಿತಿಯಲ್ಲಿ ಹತ್ತು ಗ್ರಾಮಗಳಿದ್ದು ಇದುವರೆವಿ ಅಭಿವೃದ್ಧಿ ಕೆಲಸಗಳಿಗಾಗಿ ಹುಂಜೂರು ಹಣವೆಷ್ಟು ?

ಈ) ಹಾಗಿಲ್ಲದಿದ್ದಲ್ಲಿ ಮಂಜೂರು ಮಾಡದೇ ಇರಲು ಕಾರಣಗಳೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು).—

ಅ) ೧೯೮೪–೮೫ ರೂ. ೩೦,೦೦೦
೧೯೮೫–೮೬ ರೂ. ೨೫,೦೦೦

ಆ) ಉದ್ಭವಿಸುವುದಿಲ್ಲ.

ಇ) ೧೯೮೪-೮೫ ರೂ. ೩೦,೩೦೦
೧೯೮೫-೮೬ ರೂ. ೨೫,೦೦೦

ಈ) ಉದ್ಭವಿಸುವುದಿಲ್ಲ.

ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆಗಳ ಬಗ್ಗೆ

೩೫೫. ಶ್ರೀ ಪಟಿವಂಕಿ ರತ್ನಾಕರ್ (ತೀರ್ಥಹಳ್ಳಿ).—ಮಾನ್ಯ ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪಶ್ಚಿಮಘಟ್ಟಗಳ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಈವರೆಗೆ ಸರ್ಕಾರಕ್ಕೆ ಬಂದಿರುವ ಕೇಂದ್ರದ ಹಣಕಾಸಿನ ಸಹಾಯ ಧನ ಎಷ್ಟು ? ವರ್ಷವಾರು ವಿವರಗಳನ್ನು ಒದಗಿಸುವುದು.

ಆ) ಈ ಹಣವನ್ನು ಯಾವ ಉದ್ದೇಶಗಳಿಗಾಗಿ ಎಷ್ಟು ಜಿಲ್ಲೆಗಳಲ್ಲಿ ಖರ್ಚು ಮಾಡಲಾಗಿದೆ ? (ಜಿಲ್ಲಾವಾರು ಪ್ರತ್ಯೇಕ ವಿವರಗಳು)

ಶ್ರೀ ಅಬ್ದುಲ್ ನಜೀರ್ ಸಾಬ್ (ಮಾನ್ಯ ಗ್ರಾಮೀಣ ಅಭಿವೃದ್ಧಿ, ಪಂಚಾಯತ್‌ರಾಜ್ ಮತ್ತು ವಕ್ಫ್ ಮಂತ್ರಿಗಳು).—

ಅ) ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆಯು ರಾಜ್ಯದ ೯ ಜಿಲ್ಲೆಗಳ ೪೦ ತಾಲ್ಲೂಕುಗಳಲ್ಲಿ ಅನುಷ್ಠಾನದಲ್ಲಿರುವುದು ಈ ಯೋಜನೆಯು ೧೯೭೪-೭೫ ರಿಂದ ಜಾರಿಯಲ್ಲಿರುವುದು ವರ್ಷವಾರು ಕೇಂದ್ರ ಸರ್ಕಾರದ ಹಣಕಾಸಿನ ಸಹಾಯ ಧನ ಈ ರೀತಿ ಇದೆ.

ವರ್ಷ		ಕೇಂದ್ರದಿಂದ ಬಂದ ಸಹಾಯ ಧನ (ಲಕ್ಷ ರೂ.ಗಳಲ್ಲಿ)
೧.	೧೯೭೪-೭೫	೨೯.೦೦
೨.	೧೯೭೫-೭೬	೨೯.೦೦
೩.	೧೯೭೬-೭೭	೯೨-೦೦
೪.	೧೯೭೭-೭೮	೧೨೦.೦೦
೫.	೧೯೭೮-೭೯	೧೩೮.೦೦
೬.	೧೯೭೯-೮೦	೧೫೪.೦೦
೭.	೧೯೮೦-೮೧	೧೯೧.೦೦
೮.	೧೯೮೧-೮೨	೨೩೦.೦೦
೯.	೧೯೮೨-೮೩	೨೮೬.೦೦
೧೦.	೧೯೮೩-೮೪	೩೬೩.೦೦
೧೧.	೧೯೮೪-೮೫	೪೫೭.೦೦
೧೨.	೧೯೮೫-೮೬	೪೫೭.೦೦
೧೩.	೧೯೮೬-೮೭	೬೩೩.೦೦
೧೪.	೧೯೮೭-೮೮	೬೬೭.೦೦
	ಒಟ್ಟು	೩೮೪೭.೮೫